



(6ನೇ ಪುಟದಿಂದ)

ಜೀವನ ನಿರ್ವಹಣೆಗಾಗಿ ಕಷ್ಟಪಟ್ಟು ಕೆಲಸ ಮಾಡಲು ಪ್ರಾರಂಭಿಸಿದರು. ಮಿಲ್‌ಗಳಲ್ಲಿ ಕೂಲಿ ಕೆಲಸ, ದಿನಪತ್ರಿಕೆಗಳನ್ನು ಮಾರುವದು, ಸಿನೆಮಾ ಥಿಯೇಟರ್‌ಗಳಲ್ಲಿ ವ್ಯವಸ್ಥಾಪಕರಾಗಿ, ಹೊಟೇಲ್‌ಗಳಲ್ಲಿ ವೇಟರ್ ಆಗಿ ಕೆಲಸ ಮಾಡಿದರು. ಕೆಲಸಮಯ ಟೇಲರಿಂಗ್, ಸೋಪ್ ಫ್ಯಾಕ್ಟರಿಯಲ್ಲಿ– ಹೀಗೆ ಸಿಕ್ಕ ಕೆಲಸಗಳನ್ನು ಮಾಡುತ್ತಾ ಜೀವನ ಸಾಗಿಸಿದರು. ಒಂದು ಹೊತ್ತಿನ ಊಟಕ್ಕೂ ಪರದಾಡಿದರು. ಹೀಗಾಗಿ ಪ್ರಾಥಮಿಕ ಶಿಕ್ಷಣ ಅರ್ಧಕ್ಕೆ ನಿಂತಿತು. ಹಾಗೆಯೇ ಕೆಲಸ ಹುಡುಕುತ್ತಾ ಕೊಲ್ಲಾಪೂರಕ್ಕೆ ಬಂದರು.

ಕೊಲ್ಲಾಪೂರದ ಸರ್ಕಾರ ಶ್ರೀಮಂತ ವಿಜಯ ಸಿಂಹಜಿ ನಿಂಬಾಳಕರ ಹಾಗೂ ಅವರ ಪತ್ನಿ ಸತ್ಯವತಿ ದೇವಿಯವರ ಸಹಾಯ ದಿಂದ ಕೊಲ್ಲಾಪೂರದಲ್ಲಿ ಒಂದು ಫೋಟೋ ಸ್ಟುಡಿಯೋ ಪ್ರಾರಂಭಿಸಿದರು. 40 ವರ್ಷಗಳ ಕಾಲ ಪ್ರೆಸ್ ಫೋಟೋಗ್ರಾಫರ್ ಎಂದು ಕೆಲಸ ಮಾಡಿದರು. ಕೊಲ್ಲಾಪೂರದಲ್ಲಿ ಅಕ್ರೆಡಿಷನ್ ಕಾರ್ಡ್ ಹೊಂದಿದ ಮೊದಲ ಫೋಟೋಗ್ರಾಫರ್ ಇವರಾಗಿದ್ದರು.

ಫೋಟೋಗ್ರಾಫಿಯನ್ನು ಮಾಡುತ್ತಿರುವಾಗ ಇವರು ತೆಗೆದ ಅನೇಕ ಛಾಯಾಚಿತ್ರಗಳಲ್ಲಿ 'ಹೆಣ್ಣಿನ ಸೌಂದರ್ಯ' ಕುರಿತು 100 ಉತ್ತಮ ಛಾಯಾಚಿತ್ರಗಳನ್ನು ಆರಿಸಿ, ದೊಡ್ಡ ಅಳತೆಯಲ್ಲಿ ಪ್ರಿಂಟ್ ಹಾಕಿಸಿ ಪ್ರದರ್ಶನ ಏರ್ಪಡಿಸಿದಾಗ, ಜನ ಟಿಕೆಟ್ ತೆಗೆದುಕೊಂಡು, ಸಾಲಲ್ಲಿ ನಿಂತು ಪ್ರದರ್ಶನ ವೀಕ್ಷಿಸಿದ್ದು ವಿಶೇಷವಾಗಿತ್ತು. ಪ್ರದರ್ಶನ ವೀಕ್ಷಿಸಲು ಬರುತ್ತಿದ್ದ ಜನಸಂದಣಿ ಹಾಗೂ ಪ್ರೇಕ್ಷಕರ ಒತ್ತಾಯ ದಿಂದ ಪ್ರದರ್ಶನವನ್ನು 15 ದಿನಗಳವರೆಗೆ ವಿಸ್ತರಿಸಲಾಯಿತು. 'ಸ್ತ್ರೀ ಸೌಂದರ್ಯ' ಕುರಿತಾಗಿದ್ದ ಈ ಪ್ರದರ್ಶನದಿಂದ ಯಶಸ್ಸು, ಕೀರ್ತಿ ಹಣ ಎಲ್ಲವೂ ಅವರಿಗೆ ಸಿಕ್ಕಿತು.

ಕೊಲ್ಲಾಪೂರ, ಪುಣೆ, ಮುಂಬಯಿ, ಸತಾರಾ, ಅಹಮ್ಮದ್‌ನಗರ, ನಾಸಿಕ್, ಬೆಳಗಾವಿ, ಗೋವಾ ಮುಂತಾಗಿ ಕರ್ನಾಟಕ, ಮಹಾ ರಾಷ್ಟ್ರದ ಪ್ರಮುಖ ನಗರಗಳಲ್ಲಿ 30ಕ್ಕೂ ಹೆಚ್ಚು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದಾರೆ. ಈ ಛಾಯಾಚಿತ್ರ ಪ್ರದರ್ಶನದಿಂದ ಪ್ರೇರಣೆಗೊಂಡ ಇವರಲ್ಲಿ ಅಂತರ್ಗತವಾಗಿದ್ದ ಕಲಾವಿದ ಎಚ್ಚೆತ್ತು ಕೊಂಡ. ಕೊಲ್ಲಾಪೂರದಲ್ಲಿ ಸಿನೆಮಾ ಪ್ರಚಾರದ ಸಲುವಾಗಿ ರಚಿಸ ಲಾದ ದೊಡ್ಡ ಬ್ಯಾನರ್‌ಗಳು ಇವರನ್ನು ಆಕರ್ಷಿಸಿದವು. ಕಲಾವಿದ ನಾಗಬೇಕೆಂದು ಕನಸು ಕಂಡರು. ಚಿತ್ರಕಲಾವಿದ ಹಾಗೂ ಬ್ಯಾನರ್ ರಚಿಸುತ್ತಿದ್ದ ಅಣ್ಣ ವಸಂತ ಬೇಂದ್ರೆಯವರ ಮಾರ್ಗದರ್ಶನದಲ್ಲಿ ಕ್ಯಾನ್ವಾಸ್ ಮೇಲೆ ತೈಲವರ್ಣದಿಂದ ಚಿತ್ರ ರಚಿಸಲು ಪ್ರಾರಂಭಿಸಿ ದರು. ಹಿರಿಯ ಕಲಾವಿದ ಜಿ. ಕಾಂಬಳೆಯವರು ಮಾರ್ಗದರ್ಶನ ಮಾಡಿದರು. ಹೀಗೆ ದೃಢವಾದ ಸಂಕಲ್ಪ, ಛಲ, ನಿರಂತರ ಪರಿಶ್ರಮ ದಿಂದ ಕ್ಯಾನ್ವಾಸ್ ಮೇಲೆ ಅನೇಕ ಕಲಾಕೃತಿಗಳನ್ನು ರಚಿಸಿದರು.

ಸಂತ ಜ್ಞಾನೇಶ್ವರ, ರಾಧಾಕೃಷ್ಣ, ಸಂಗೀತ ಮತ್ತು ಶಾರದೆ, ಸ್ವಾಮಿ ವಿವೇಕಾನಂದ, ಗೀತಾವಾಚನ, ಸಂತ ನಾಮದೇವ, ಸಂತ ತುಕಾರಾಮ, ಗಣಪತಿ, ಸರಸ್ವತಿ, ಲಕ್ಷ್ಮೀ, ದತ್ತಾತ್ರೇಯ, ಭಕ್ತ ಕುಂಬಾರ, ತುಳಜಾ ಭವಾನಿ, ಕೈಲಾಸಪತಿ ಶಿವಶಂಕರ, ಶಿರಡಿ ಸಾಯಿಬಾಬಾ ಮುಂತಾದ ದೇವಾನುದೇವತೆಗಳು ಇವರ ಕುಂಚ ದಲ್ಲಿ ಜೀವ ಪಡೆದಿದ್ದಾರೆ. ಅಲ್ಲದೇ ಸಾಮಾನ್ಯ ಮಹಿಳೆಯರಿಗೆ ವಿಶೇಷ ಚಿನ್ನಾಭರಣಗಳು, ಉಡಿಗೆ ತೊಡುಗೆಗಳಿಂದ ಅಲಂಕರಿಸಿ, ದೇವತೆ ಗಳು, ಅಪ್ಸರೆಯರಂತೆ ಚಿತ್ರಿಸಿ, ಹೆಣ್ಣಿನ ಸೌಂದರ್ಯಕ್ಕೆ ಮೆರುಗು ಕೊಟ್ಟಿದ್ದಾರೆ. ಅವರು ಎಲ್ಲಿಯೇ ಕಲಾ ಪ್ರದರ್ಶನ ಏರ್ಪಡಿಸಿದರೂ ಜನ ಕಿಕ್ಕಿರಿದು ನೋಡಿ ಸವಿಯುತ್ತಾರೆ.

ರಾಜಾ ರವಿವರ್ಮ, ಎಸ್.ಎಂ. ಪಂಡಿತ, ಎಂ.ಎ. ಚೆಟ್ಟಿಯವ ರಂತೆ ನೈಜ ಕಲೆಯಲ್ಲಿ ತಮ್ಮದೇ ಆದ ವಿಶೇಷ ಸ್ಥಾನ ಪಡೆದ ಕರ್ನಾಟಕದ ಹಿರಿಯ ಕಲಾವಿದ ಈ ಬೇಂದ್ರೆ. ಆಧುನಿಕ ಕಲಾ ಚಳುವಳಿಯಿಂದಾಗಿ ಕರ್ನಾಟಕ ಕಲಾ ವಲಯದಲ್ಲಿ ಇವರಿಗೆ ಸಿಗಬೇಕಾದ ಸ್ಥಾನಮಾನ ಸಿಕ್ಕಿಲ್ಲ. ಕರ್ನಾಟಕ ಹಿರಿಯ ಕಲಾವಿದರಲ್ಲಿ ಒಬ್ಬರಾದ ಗೋವಿಂದ ಬೇಂದ್ರೆಯವರನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿ ಗೌರವಿಸಿ ಪ್ರಶಸ್ತಿಯನ್ನು ನೀಡಬೇಕು. ಸರ್ಕಾರ, ವಿಶ್ವ ವಿದ್ಯಾಲಯಗಳು ಇವರ ಪ್ರತಿಭೆಗೆ ಸೂಕ್ತ ರಾಜ್ಯೋತ್ಸವ ಪ್ರಶಸ್ತಿ, ವೆಂಕಟಪ್ಪ ಪ್ರಶಸ್ತಿ, ನಾಡೋಜ ಪ್ರಶಸ್ತಿಗಳನ್ನು ನೀಡಿ ಗೌರವಿಸ ಬೇಕು. ಇದು ಗಡಿಭಾಗದ ಕಲಾವಿದರ ಆಶಯವೂ ಹೌದು.